ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 27.06.2024

ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/11/ಸ್ವ.ಸೇ-ಹಂಚಿಕೆ/2017-18/7

## ಜ್ಞಾಪನ

**ವಿಷಯ** : ಎನ್.ಎಸ್.ಎಸ್ ಅನುದಾನಿತ ಘಟಕಗಳನ್ನು ಹೆಚ್ಚುವರಿಯಾಗಿ ಹೊಂದಲು ಇಚ್ಛಿಸುವ ಸಂಸ್ಥೆಗಳು ಮಾಹಿತಿಯನ್ನು ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ** : ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾ.ಸೇ.ಯೋ/19/2021/2024-25/73 ಬೆಂಗಳೂರು ದಿನಾಂಕ:24.06.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ (ರಾ.ಸೇ.ಯೋ) ಅನುಷ್ಠಾನ ಸಕ್ರೀಯವಾಗಿದ್ದು ಈಗಿರುವ 110 ಘಟಕಗಳಲ್ಲದೆ ಇನ್ನೂ ಹೆಚ್ಚಿನ ಸಂಖ್ಯೆಯ ಅನುದಾನಿತ ಘಟಕಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆ.

ಈಗಾಗಲೇ 1 ಅಥವಾ 2 ರಾ.ಸೇ.ಯೋ ಘಟಕಗಳನ್ನು ಹೊಂದಿರುವ ಪಾಲಿಟೆಕ್ನಿಕ್ ಸಂಸ್ಥೆಗಳು ಕ್ರಮವಾಗಿ 2 ಅಥವಾ 3 ಹೆಚ್ಚುವರಿ ಅನುದಾನಿತ ಎನ್.ಎಸ್.ಎಸ್ ಘಟಕಗಳನ್ನು ಹೊಂದಬಹುದಾಗಿದೆ. ಪ್ರಸ್ತುತ ಸ್ವ-ಆರ್ಥಿಕ ಘಟಕಗಳನ್ನು ಹೊಂದಿರುವ ಪಾಲಿಟೆಕ್ನಿಕ್ ಸಂಸ್ಥೆಗಳು 1, 2, ಅಥವಾ 3 ಅನುದಾನಿತ ಘಟಕಗಳನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ. ಕಾರಣ ಇಲಾಖಾ ವ್ಯಾಪ್ತಿಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳು ಅನುದಾನಿತ ರಾ.ಸೇ.ಯೋ ಘಟಕಗಳನ್ನು ಸ್ಥಾಪಿಸುವ ಉದ್ದೇಶ/ಬೇಡಿಕೆಯಿದ್ದಲ್ಲಿ ಈ ಕೆಳಗಿನ ನಮೂನೆಯಂತೆ ಮಾಹಿತಿಯನ್ನು ದಿನಾಂಕ: 06.07.2024 ರೊಳಗಾಗಿ ಅಂಚೆ ಮೂಲಕ ಮತ್ತು ಪ್ರತಿಯನ್ನು ಇಮೇಲ್ ಮೂಲಕ nssdte@gmail.com ಸಲ್ಲಿಸಲು ಪ್ರಾಚಾರ್ಯರಿಗೆ ಸೂಚಿಸಲಾಗಿದೆ

| ಪಾಲಿಟೆಕ್ನಿಕ್ ಸಂಸ್ಥೆಯ ಹೆಸರು | ಪ್ರಸ್ತುತ ಹೊಂದಿರುವ ಅನುದಾನಿತ ಎನ್ ಎಸ್ ಎಸ್ ಘಟಕಗಳ ಸಂಖ್ಯೆ | ಪ್ರಸ್ತುತ ಹೊಂದಿರುವ ಸ್ವ ಆರ್ಥಿಕ ಎನ್.ಎಸ್.ಎಸ್ ಘಟಕಗಳ ಸಂಖ್ಯೆ | ಹೆಚ್ಚುವರಿಯಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಅನುದಾನಿತ ಎನ್ ಎಸ್ ಎಸ್ ಘಟಕಗಳ ಸಂಖ್ಯೆ |
|---|---|---|---|
| | | | |
| | | | |

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಎನ್.ಎಸ್.ಎಸ್ ಅಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು-01
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.